ಕರ್ನಾಟಕ ಸರ್ಕಾರ

ಸಂಖ್ಯೆ: ಜಿತಸಂ.ಬೆಂ.ನ.ತರಬೇತಿ.ವಿವ. 33 2015-16

ಪ್ರಾಚಾರ್ಯರವರ ಕಾರ್ಯಾಲಯ
ಜಿಲ್ಲಾ ತರಬೇತಿ ಸಂಸ್ಥೆ, ನಗರ,
ಕನಕಪುರ ಮುಖ್ಯ ರಸ್ತೆ, ಬನಶಂಕರಿ,
ಬೆಂಗಳೂರು-70,ದಿ:05/08/2015.
ಟೆಲಿಫ್ಯಾಕ್ಸ್:26717346.
E-mail dtibngurban-ati-kamy@nic.in

ಗೆ,

40 ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು - 560 001.

EST (7) 2734 13.8.15

ಮಾನ್ಯರೆ,

ವಿಷಯ:- ವಿವಿಧ ಇಲಾಖೆಗಳ 'ಸಿ' ಗುಂಪಿನ ಸಿಬ್ಬಂದಿಗಳಿಗೆ ತರಬೇತಿಗಳನ್ನು ಹಮ್ಮಿಕೊಂಡಿರುವ ಬಗ್ಗೆ.

ಉಲ್ಲೇಖ: 1. ದಿನಾಂಕ::23/03/2015 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಂದ 2015-16ನೇ ಸಾಲಿನ ವಾರ್ಷಿಕ ತರಬೇತಿ ವೇಳಾಪಟ್ಟಿಯನ್ನು ಅನುಮೋದಿಸಿರುತ್ತಾರೆ.

2 .ದಿನಾಂಕ 19-2-.2015 ರಂದು ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ ಮೈಸೂರು ರವರ ಸಭೆಯಲ್ಲಿ ನಿರ್ಣಹಿಸಿದಂತೆ

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಇವರು ಅನುಮೋದಿಸಿರುವ 2015-16ನೇ ಸಾಲಿನ ವಾರ್ಷಿಕ ತರಬೇತಿ ವೇಳಾಪಟ್ಟಿಯಂತೆ ವಿವಿಧ ಇಲಾಖೆಗಳ ಗ್ರೂಪ್ 'ಸಿ' ಸಿಬ್ಬಂದಿ ವರ್ಗದವರಿಗೆ ಸೆಪ್ಟೆಂಬರ್ ಮಾಹೆ 2015ರಲ್ಲಿ ವಿವಿಧ ತರಬೇತಿಗಳನ್ನು ಹಮ್ಮಿಕೊಂಡಿದ್ದು, . ಸರ್ಕಾರಿ ನೌಕರರು ತಮ್ಮ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಣೆ ಮತ್ತು ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಸಿಬ್ಬಂದಿಗಳಿಗೆ ವಿಷಯ ಪರಿಣಿತರ ಮೂಲಕ ತರಬೇತಿಯನ್ನು ನೀಡಲಾಗುತ್ತಿದೆ.

| ಕ್ರ.ಸ. | ತರಬೇತಿ ವಿಷಯ | ತರಬೇತಿ ದಿನಾಂಕ |
|---|---|---|
| 1 | ವಿವಿಧ ಇಲಾಖೆಗಳ 'ಸಿ' ಗುಂಪಿನ ಶೀಘ್ರಲಿಪಿಗಾರರಿಗೆ ಹಾಗೂ ಬೆರಳಚ್ಚುಗಾರರಿಗೆ ಸೇವಾ ವಿಷಯಗಳ ಬಗ್ಗೆ ತರಬೇತಿ. | 07/09/2015 ರಿಂದ 09/09/2015 |
| 2 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ಕೆ.ಟಿ.ಪಿ.ಪಿ ಆಕ್ಟ್ ಬಗ್ಗೆ ತರಬೇತಿ | 10/09/2015 ರಿಂದ 11/09/2015 |
| 3 | ವಿವಿಧ ಇಲಾಖೆಯ ಗ್ರೂಪ್ 'ಸಿ' ನೌಕರರುಗಳಿಗೆ ವ್ಯಕ್ತಿತ್ವ ವಿಕಸನ , ನಾಯಕತ್ವ ಬೆಳವಣಿಗೆ , ಸಂವಹನ ಕೌಶಲ್ಯ ಬಗ್ಗೆ ತರಬೇತಿ. | 21/09/2015 ರಿಂದ 23/09/201 |
| 4 | ವಿವಿಧ ಇಲಾಖೆಯ ಗ್ರೂಪ್ 'ಸಿ' ಸಿಬ್ಬಂದಿಗಳಿಗೆ ಗಣಕ ಯಂತ್ರ ಬೇಸಿಕ್ ಬಗ್ಗೆ ತರಬೇತಿ. | 21/09/2015 ರಿಂದ 23/09/2015 |
| 5 | ವಿವಿಧ ಇಲಾಖೆಗಳ 'ಸಿ'ಗುಂಪಿನ ಮೇಲ್ವಿಚಾರಕರುಗಳಿಗೆ, ವ್ಯವಸ್ಥಾಪಕರುಗಳಿಗೆ ಸಿ.ಸಿ.ಎ. ನಿಯಮಗಳ ಬಗ್ಗೆ ತರಬೇತಿ | 28/09/2015 ರಿಂದ 30/09/2015 |

ತರಬೇತಿಗೆ ನಿಯೋಜಿಸಿದ ಸಿಬ್ಬಂದಿಗಳ ಹೆಸರುಗಳನ್ನು ತರಬೇತಿ ನಡೆಯುವ ಹತ್ತು ದಿನಗಳ ಮುಂಚಿತವಾಗಿ ಕಳುಹಿಸಲು ಕೋರಿದೆ. ತರಬೇತಿ ನಡೆಯುವ ದಿನಾಂಕದಂದು ಬೆಳಿಗ್ಗೆ 10 ಗಂಟೆಗೆ ಈ ಸಂಸ್ಥೆಗೆ ಹಾಜರಾಗಿ ತರಬೇತಿಗೆ ವರದಿ ಮಾಡಿಕೊಳ್ಳುವಂತೆ ಆದೇಶ ಹೊರಡಿಸಲು ಕೋರಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಇವರು ಈ ತರಬೇತಿ ಸಂಸ್ಥೆಯಿಂದ ನಿಯೋಜನಾ ಕೋರಿಕಾ ಪತ್ರ ಬಂದಲ್ಲಿ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ತಪ್ಪದೆ ತರಬೇತಿಗೆ ಸಿಬ್ಬಂದಿಗಳನ್ನು ನಿಯೋಜಿಸಿ ತರಬೇತಿಗೆ ಹಾಜರಾಗುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಹಾಗೂ ತರಬೇತಿಗೆ ಹಾಜರಾಗದವರ ಬಗ್ಗೆ ವರದಿ ನೀಡಲು ಸಹ ಸೂಚಿಸಿರುತ್ತಾರೆ.

ಉಲ್ಲೇಖ (2) ರನ್ವಯ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ಕಛೇರಿಗಳಲ್ಲಿನ ನೌಕರರುಗಳನ್ನು ಬೆಂಗಳೂರು ನಗರ ಜಿಲ್ಲಾ ತರಬೇತಿ ಸಂಸ್ಥೆಗೆ ನಿಯೋಜಿಸಲು ನಿರ್ಣಯ ಕೈಗೊಳ್ಳಲಾಗಿದೆ.

ಆದಕಾರಣ, ದಯವಿಟ್ಟು ಮೇಲ್ಕಂಡ ತರಬೇತಿಗಳಿಗೆ ಒಂದು ಕಛೇರಿಯಿಂದ ಇಬ್ಬರಂತೆ ನೌಕರರನ್ನು ನಿಯೋಜಿಸಿ, ಹಾಗೂ ನಿಯೋಜನೆಗೊಂಡ ಅಭ್ಯರ್ಥಿಗಳು ತರಬೇತಿ ಪ್ರಾರಂಭದ ದಿನಾಂಕದಂದು ಬೆಳಿಗ್ಗೆ 10-00 ಗಂಟೆಗೆ ಈ ಸಂಸ್ಥೆಯಲ್ಲಿ ಹಾಜರಾಗಲು ನಿರ್ದೇಶನ ನೀಡಲು ಹಾಗೂ ತರಬೇತಿಯನ್ನು ಯಶಸ್ವಿಗೊಳಿಸಲು ಸಹಕರಿಸಬೇಕಾಗಿ ವಿನಯಪೂರ್ವಕವಾಗಿ ಕೋರಲಾಗಿದೆ.

ತಮ್ಮ ನಂಬುಗೆಯ,

ಪ್ರಾಚಾರ್ಯರು
ಜಿಲ್ಲಾ ತರಬೇತಿ ಸಂಸ್ಥೆ,
ಬೆಂಗಳೂರು ನಗರ.

**ಹಿಂಬರಹ ಸಂಖ್ಯೆ: ಡಿಟಿಇ 25 ಇಎಸ್‌ಟಿ (7) 2012 ಭಾಗ-2** 1165 **ದಿನಾಂಕ: 20-08-2015**

ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ನಗರ ಇವರ ಪತ್ರ ಸಂಖ್ಯೆ: **ಜಿತಸಂ.ಬೆಂ.ನ.ತರಬೇತಿ.ಏವ.33 2015-16** ದಿನಾಂಕ **05-08-2015** ರ ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಆಡಳಿತಾಧಿಕಾರಿ

**ಇವರಿಗೆ,**

1. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ ಸಂಸ್ಥೆ, ಬೆಂಗಳೂರು.
2. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಕೆ.ಎಸ್.ಜೆ.ಟಿ (ಸಂಜೆ), ಬೆಂಗಳೂರು.
3. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು.
4. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್ (ಸಂಜೆ), ಬೆಂಗಳೂರು.
5. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು.
6. ಪ್ರಿನ್ಸಿಪಾಲರು, ಸರ್ಕಾರಿ ಜಿ.ಆರ್.ಐ.ಪಿ.ಸಿ. ಬೆಂಗಳೂರು.
7. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಆರ್.ಸಿ.ಐ.ಬಿ.ಎಂ. ಬೆಂಗಳೂರು.
8. ಪ್ರಿನ್ಸಿಪಾಲರು, ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ, ಬೆಂಗಳೂರು.
9. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ, ಬೆಂಗಳೂರು.
10. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ, ಬೆಂಗಳೂರು.
11. ಪ್ರಿನ್ಸಿಪಾಲರು, ಸರ್ಕಾರಿ ಜವಳಿ ಸಂಸ್ಥೆ, ಬೆಂಗಳೂರು.
12. ಇ-ಆಡಳಿತ ಘಟಕಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.)